# VI Semester B.Com. Examination, May 2011
## (Semester Scheme)
## COMMERCE
## Paper – 6.2 : Income Tax – II

Time : 3 Hours Max. Marks : 90

***Instruction** : Answer should be **completely** either in **English** or in **Kannada**.*

### SECTION – A

Answer **any ten** sub questions. **Each** sub question carries **two** marks. **(10×2=20)**

1. a) What do you mean by profession ?

   b) Bringout any two expressly allowable expenses under business.

   c) What are the long term specified assets U/S 54 EC ?

   d) Explain the provisions U/S 80E.

   e) Expand CBDT and PAN.

   f) What is indexed cost of Acquisition ?

   g) What is tax free commercial debentures ?

   h) What is the provision relating to carry forward of loss from speculative business ?

   i) Write a note on taxability of dividend income.

   j) Mention any four transfers not regarded as transfer for capital gain taxation purposes.

   k) What is self-assessment ?

   l) What is speculative transaction ?

## SECTION – B

Answer **any five** questions. **Each** question carries 5 marks. **(5×5=25)**

2. Briefly explain the powers of Director General of Income tax.

3. Discuss with reason the admissibility of the following expenses while computing profit and gains of business.

   1) Sales tax paid during the year Rs. 15,000

   2) Interest on capital Rs. 5,000

   3) Donation to political party Rs. 10,000

   4) Loss due to theft Rs. 20,000

   5) Life insurance premium Rs. 3,000.

4. Explain the rules regarding inter-head set-off of losses.

5. Mr. Akshara has the following incomes during the year ending 31-3-2010.

   i) Dividend declared by Tata Co. Rs. 12,000

   ii) Interim dividend received Rs. 5,000.

   iii) He won gold worth Rs. 2,50,000 from Rajasthan state lottery.

   iv) Interest received on government securities held as investment Rs. 20,000.

   v) He earned Rs. 2,00,000 as prize money on horse races. These horses are owned by him and expenditure incurred on maintenance of these horses amounted to Rs. 2,10,000.

   Compute his income from other sources for the A.Y. 2010-11.

6. Mr. Arun sold his agricultural land situated in Urban Area for Rs. 35,00,000 which he had purchased on 1-1-85 for Rs. 5,00,000 and incurred brokerage of Rs. 5,000 on sale and Rs. 2,000 on its purchase. He purchased another piece of agricultural land on 1-1-2011 for Rs. 25,00,000. Compute taxable capital gains for the A.Y. 2010-11. The cost inflation index for 84-85=125, 2009-10 = 632.

7. Mr. Arjun Rao a senior citizen furnishes the following information for P.Y. 09-10

   Pension received Rs. 6,000 p.m.

   Taxable income from business Rs. 1,28,000

   Short term capital gain of Rs. 1,10,000

   He contributed Rs. 15,000 towards life insurance policy and Rs. 2,000 towards NSC. He also paid a mediclaim insurance premium of Rs. 14,000 during the P.Y. 09-10 through cheque. what is his taxable income for the A.Y. 10-11 ?

8. From the following information of Dr. Manohar, compute his taxable income from profession for the A.Y. 2010-11.

   Receipts : consultation fees Rs. 50,000, gifts from patients Rs. 20,000, gifts from father-in-law Rs. 30,000, sale of medicine 12,000, visiting fees Rs. 10,000.

   Payments: Clinic rent Rs. 25,000, professional books purchased Rs. 12,000, charitable donations Rs. 4,000.

9. Compute income from other sources of Mr. Keshav for A.Y. 2010-11

a) Family pension received Rs. 3,000 p.m.

b) Winning from lottery Rs. 69,100 (Net)

c) Interest on fixed deposit Rs. 15,000 (Gross)

d) Purchase of lottery tickets Rs. 500.

## SECTION – C

Answer **any three** questions. **Each** question carries **15** marks. **(3×15=45)**

10. Mr. Ranganath is a leading tax consultant who maintains his books of account on cash basis furnish the following receipts and payments account for the previous year 2009-10. Compute his professional income.

**Receipts and Payments Account for the year ending 31-3-2010**

| **Receipts** | **Rs.** | **Payments** | **Rs.** |
|---|---|---|---|
| Balance b/d | 22,000 | Books purchased | |
| Fees from clients : | | (Annual Publication) | 12,000 |
| for 2009-10 | 1,50,000 | Computer purchased | 30,000 |
| for 2010-11 | 33,000 | Car expenses | 18,000 |
| Gifts and presents | 25,000 | Office expenses | 40,000 |
| Interest free loan from a | | Salary to staff | |
| client for purchase of car | 2,40,000 | for 2009-10 | 32,000 |
| Winning from lottery (Gross) | 46,000 | for 2010-11 | 8,000 |
| Share from H.U.F. | 70,000 | Car purchased | 3,00,000 |

| | | | |
|---|---|---|---|
| Bonus and commission from | | Income tax | 5,000 |
| the partnership firm | 14,000 | Professional Tax | 3,000 |
| | | Medical insurance premium | 2,000 |
| | | Balance c/d | 1,50,000 |
| | **Rs. 6,00,000** | | **Rs. 6,00,000** |

Car is partly used for official purposes (40%) and partly for personal purposes (60%). Gifts and presents include Rs. 5,000 received from a client. Office expenses include Rs. 5,000 paid as salary to his wife who casually helps him in the office. Depreciate car 15%.

11. Mr. Sharath, a resident of India has furnished the following incomes for the P.Y. 2009-10. Compute his income from other sources for the A.Y. 2010-11.

i) Winnings from Crossword Puzzles (net) Rs. 6,940.

ii) Royalty from text book written by him (gross) Rs. 45,000 (Admissible deducting Rs. 12,500)

iii) 8% interest on Rs. 40,000 municipal debentures.

iv) 10% interest on Rs. 80,000 Karnataka State Govt. loan.

v) He has invested Rs. 30,000 in 7% Capital Investment Bonds of Government and received interest for the year.

vi) Rs. 2,000 as interest on bank deposits.

vii) Dividends from a domestic co. Rs. 8,000

viii) Income from undisclosed sources Rs. 10,000

12. Following is the Profit and Loss A/c of Mr. Shivakumar a merchant for the year ending 31-3-2010. Compute income from business for A.Y. 2010-11.

| Dr. | Rs. | | Cr. Rs. |
|---|---|---|---|
| To Rent | 60,000 | By Gross Profit | 5,23,000 |
| " Rates | 6,000 | " Interest from investment | 28,000 |
| " Salary to staff | 54,000 | " Rent from property | 24,000 |
| " Diwali pooja expenses | 2,000 | " Sundry income | 16,000 |
| " Interest on loan | 1,25,000 | " Commission | 37,000 |
| " Sundry expenses | 55,000 | | |
| " Bad debts | 6,000 | | |
| " Charity | 1,000 | | |
| " RBD | 2,000 | | |
| " Entertainment Exp | 8,500 | | |
| " Loss by theft | 14,000 | | |
| " Net Profit | 2,94,500 | | |
| | **6,28,000** | | **6,28,000** |

**Additional Information :**

1) Salary to staff includes salary of Rs. 24,000 of a son who is a B.Com. student who casually helps in business.

2) Rent includes Rs. 12,000 of a shop belonging to the assesse himself.

3) A loan of Rs. 60,000 @ 15% p.a. is taken from his wife out of funds advanced by him and interest is included in interest on loan.

4) Sundry expenses include Rs. 9,000 being expenses incurred on pilgrimage to Haridwar.

5) Entertainment exp include Rs. 1,500 spent on tea of some guests of a local MLA.

6) He earned Rs. 40,000 in gold smuggling and not shown in books.

7) Rates includes Rs. 4,000 for the property let.

13. Mr. X submits the details of the assets sold for the year ending 31-3-2010.

a) Shares (purchased in April 1991 for Rs. 54,000) sold on 15-12-2009 for Rs. 95,000

b) On 1-4-82 he agreed to sell Jewellery to Y for Rs. 2,70,000 which was purchased in 1977 for Rs. 1,50,000. However the sale could not be effected as Y backed out. He forfeited the advance of Rs. 20,000 which he received from Y. He now sold the jewellery on 15-7-09 for Rs. 13,10,000 and incurred Rs. 20,000 as selling expenses. In 2009, he purchased a small residential house for Rs. 2,50,000

c) Debentures (purchased in Sept. 2008 for Rs. 50,000) sold on 31-12-2009 for Rs. 45,000.

d) Sold his motor car (purchased in Aug. 2007 for Rs. 1,50,000) on 15-3-2010 for Rs. 1,60,000 (personal use). The CII for 82-83 = 109, 1991-92 = 199, 2009-10=632.

14. Surya submits the following details of his income for the year ending 31-3-2010.

i) He lives in a rented house. He pays a rent of Rs. 6,000 per month. He has sub let $\frac{1}{3}^{rd}$ portion of the house on a rent of Rs. 3,000 per month. He has undertaken the liability of paying municipal taxes of Rs. 1,500 on the whole house and also repairs of the whole house amounting to Rs. 6,000.

ii) Income from agricultural land in Bangladesh Rs. 20,000.

iii) Dividend from UTI Rs. 4,000

iv) He holds the following investments :

a) Rs. 1,00,000 8% tax free commercial securities (not listed)

b) Rs. 30,000 7% debentures of JCT Mills Ltd.

c) Rs. 72,000 10% tax free debentures of LIC of India.

d) 10% UP State Electricity Board Bonds Rs. 10,000.

v) Interest on postal savings bank a/c Rs. 8,000.

vi) Honorarium received for writing articles in magazines Rs. 1,000.

vii) He is an examiner of a number of universities. He received Rs. 10,000 remuneration.

Compute his income from other sources for the A.Y. 2010-11.

## ಕನ್ನಡ ಆವೃತ್ತಿ

### ವಿಭಾಗ - ಎ

1. ಯಾವುದಾದರೂ **10** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ **2** ಅಂಕಗಳು. **(10×2=20)**

a) ವೃತ್ತಿ ಎಂದರೇನು ?

b) ವ್ಯವಹಾರ ಮೂಲದಿಂದ ಬಂದ ಆದಾಯದಲ್ಲಿ ಪ್ರತ್ಯಕ್ಷವಾಗಿ ಕಳೆಯಬಹುದಾದ ಯಾವುದಾದರೂ ಎರಡು ಖರ್ಚುಗಳನ್ನು ಬರೆಯಿರಿ.

c) 54 EC ಕಾಲಂನಡಿ ದೀರ್ಘಾವಧಿ ನಿಗದಿತ ಆಸ್ತಿಗಳಾವುವು ? ಹೆಸರಿಸಿ.

d) 80E ಕಾಲಂನಡಿ ಮುರಿತಗಳ ನಿಯಮ ನೀಡಿ.

e) CBDT ಮತ್ತು PAN ವಿಸ್ತರಿಸಿ.

f) ವಶಪಡಿಸಿಕೊಂಡ ಬೆಲೆ ಎಂದರೇನು ?

g) ತೆರಿಗೆ ಮುಕ್ತ ವಾಣಿಜ್ಯ ಸಾಲ ಪತ್ರಗಳೆಂದರೇನು ?

h) ಸಟ್ಟಾ ವ್ಯವಹಾರದ ನಷ್ಟದ ಹೊಂದಾಣಿಕೆ ಮತ್ತು ಮುಂದೂಡಿಕೆಯ ಬಗೆಗೆ ಬರೆಯಿರಿ.

i) ಡಿವಿಡೆಂಡ್ ಆದಾಯದ ಬಗೆಗೆ ಆದಾಯ ತೆರಿಗೆ ನಿಯಮವೇನು ?

j) ಬಂಡವಾಳ ಮೂಲ ಆದಾಯಕ್ಕೆ ಸೇರಿದಂತೆ ಆದಾಯ ತೆರಿಗೆ ಕಾಯಿದೆಯಲ್ಲಿ ವರ್ಗಾವಣೆ ಎಂದು ಪರಿಗಣಿಸದಿರುವ ನಾಲ್ಕು ಆದಾಯವನ್ನು ಹೆಸರಿಸಿ.

k) ಸ್ವ- ಅಂದಾಜು ಎಂದರೇನು ?

l) ಸಟ್ಟಾ ವ್ಯವಹಾರ ಎಂದರೇನು ?

## ವಿಭಾಗ - ಬಿ

ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗ 5 ಅಂಕಗಳು. **(5×5=25)**

2. ಆದಾಯ ತೆರಿಗೆ ಅಧಿಕಾರಿಯ ಅಧಿಕಾರ ಹಾಗೂ ಕಾರ್ಯಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

3. ವ್ಯವಹಾರದಿಂದ ಬರುವ ಲಾಭ ಮತ್ತು ಗಳಿಕೆಯನ್ನು ಲೆಕ್ಕ ಮಾಡುವಾಗ ಈ ಕೆಳಗಿನ ವೆಚ್ಚಗಳನ್ನು ಒಪ್ಪುವ ಬಗೆಗೆ ಕಾರಣ ಸಹಿತ ಚರ್ಚಿಸಿ.

   1) ಆ ವರ್ಷದಲ್ಲಿ ಮಾರಾಟ ತೆರಿಗೆ ಕಟ್ಟಿದ್ದು ರೂ. 15,000

   2) ಬಂಡವಾಳದ ಮೇಲಿನ ಬಡ್ಡಿ ರೂ. 5,000

   3) ರಾಜಕೀಯ ಪಕ್ಷಕ್ಕೆ ಡೊನೇಷನ್ ಕೊಟ್ಟಿದ್ದು ರೂ. 10,000

   4) ಕಳ್ಳತನದಿಂದ ಆದ ನಷ್ಟ ರೂ. 20,000

   5) ಜೀವ ವಿಮಾ ಕಂತು ಕಟ್ಟಿದ್ದು ರೂ. 3,000

4. ಪರಸ್ಪರ ತಲೆ ಬರಹದ ಆದಾಯಗಳಲ್ಲಿ ನಷ್ಟವನ್ನು ಹೊಂದಾಣಿಕೆ ಮಾಡಲು ಇರುವ ನಿಯಮಗಳನ್ನು ವಿವರಿಸಿ.

5. ಶ್ರೀಯುತ ಅಕ್ಷರರ ಆದಾಯವು ವಾರ್ಷಿಕ ಕೊನೆಯ ದಿನಾಂಕ 31-3-2010 ರಂದು ಈ ಕೆಳಗಿನಂತಿದೆ.

   1) ಟಾಟಾ ಕಂಪೆನಿಯಿಂದ ಡಿವಿಡೆಂಡ್ ರೂ. 12,000

   2) ಮಧ್ಯಂತರ ಡಿವಿಡೆಂಡ್ ಪಡೆದಿದ್ದು ರೂ. 5,000

   3) ಆತ ರಾಜಸ್ಥಾನ್ ರಾಜ್ಯ ಲಾಟರಿಯಿಂದ ಗೆದ್ದ ಚಿನ್ನದ ಮೌಲ್ಯ ರೂ. 2,50,000

   4) ಸರ್ಕಾರಿ ಸಾಲಪತ್ರಗಳ ಹೂಡಿಕೆಯ ಮೇಲಿನ ಬಡ್ಡಿ ರೂ. 20,000

   5) ಕುದುರೆ ರೇಸಿನಲ್ಲಿ ರೂ. 2,00,000 ಬಹುಮಾನ ಪಡೆದಿರುತ್ತಾನೆ, ಆ ಕುದುರೆಗಳು ಆತನ ಸ್ವಂತದ್ದಾಗಿದ್ದು ರೂ. 2,10,000 ವನ್ನು ಕುದುರೆಗಳ ಸಾಕಣೆಯ ವೆಚ್ಚವಾಗಿರುತ್ತದೆ.

   ಇವರ ಇತರ ಮೂಲಗಳಿಂದ ಬಂದ ಆದಾಯವನ್ನು ಕರವರ್ಷ 10-11 ಕ್ಕೆ ಕಂಡು ಹಿಡಿಯಿರಿ.

6. ಶ್ರೀಯುತ ಅರುಣ್‌ರವರು ತನ್ನ ವ್ಯವಸಾಯದ ನಗರ ಪ್ರದೇಶ ಜಮೀನನ್ನು ರೂ. 35,00,000 ಕ್ಕೆ ಮಾರಿರುತ್ತಾರೆ. ತಾ.1-1-85 ರಲ್ಲಿ ಈ ಜಮೀನನ್ನು ರೂ. 5,00,000 ಕ್ಕೆ ಕೊಂಡುಕೊಂಡಿರುತ್ತಾರೆ. ಖರೀದಿಗೆ ದಲ್ಲಾಳಿ ಕಮೀಷನ್ ರೂ. 5,000 ಮತ್ತು ಮಾರಾಟದ ವೆಚ್ಚ ರೂ. 2,000 ವನ್ನು ಖರ್ಚುಮಾಡಿರುತ್ತಾನೆ. ತಾ.1-1-2011 ರಂದು ರೂ. 25,00,000 ಕ್ಕೆ ಇನ್ನೊಂದು ಜಮೀನನ್ನು ಖರೀದಿಸುತ್ತಾನೆ. ಆತನ ಬಂಡವಾಳ ಮೂಲದ ಆದಾಯವನ್ನು ತೆರಿಗೆ ವರ್ಷ 2010-11 ಕ್ಕೆ ಕಂಡುಹಿಡಿಯಿರಿ (ಸೂಚ್ಯಂಕ ವರ್ಷ 84-85=125, 2009-10= 632).

7. ಹಿರಿಯ ನಾಗರಿಕರಾದ ಶ್ರೀಯುತ ಅರ್ಜುನ್ ರಾವ್‌ರವರ ವಾರ್ಷಿಕ ವರ್ಷ 09-10 ರ ಮಾಹಿತಿ ಕೆಳಗಿನಂತಿದೆ.

ಪಿಂಚಣಿ ಪಡೆದಿದ್ದು ಮಾಸಿಕ ರೂ. 6,000

ವ್ಯವಹಾರ ಮೂಲದ ಲಾಭ ರೂ. 1,28,000

ಅಲ್ಪಾವಧಿ ಬಂಡವಾಳ ಮೂಲದ ಆದಾಯ ರೂ. 1,10,000

ಈ ವಾರ್ಷಿಕ ಅವಧಿಯಲ್ಲಿ ಜೀವ ವಿಮಾ ಪಾಲಿಸಿಗೆ ರೂ. 15,000 ಮತ್ತು NSC ಗೆ ರೂ. 2,000 ಕೊಟ್ಟಿರುತ್ತಾರೆ. ಅಲ್ಲದೆ ಆರೋಗ್ಯ ವಿಮೆಗೆ ರೂ. 14,000 ವನ್ನು ಚೆಕ್ಕಿನ ಮೂಲಕ ಪಾವತಿಸಿರುತ್ತಾರೆ.
ಆದಾಯ ತೆರಿಗೆ ವರ್ಷ 2010-11 ರಲ್ಲಿ ತೆರಿಗೆಗೊಳಪಡುವ ಅವರ ಆದಾಯವನ್ನು ಕಂಡುಹಿಡಿಯಿರಿ.

8. ಈ ಕೆಳಗೆ ಕೊಟ್ಟಿರುವ ಮಾಹಿತಿಯ ಮೂಲಕ ಡಾ ॥ ಮನೋಹರ್‌ರವರ ಆದಾಯ ತೆರಿಗೆ ವರ್ಷ 2010-11ರ ತೆರಿಗೆಗೊಳಪಡುವ ವೃತ್ತಿಮೂಲದ ಆದಾಯವನ್ನು ಕಂಡುಹಿಡಿಯಿರಿ.

ಸ್ವೀಕೃತಿ : ಸಲಹೆಯಿಂದ ಬಂದ ಶುಲ್ಕ ರೂ. 50,000, ರೋಗಿಗಳಿಂದ ಬಂದ ಉಡುಗೊರೆ ರೂ. 20,000

ಮಾವನಿಂದ ಪಡೆದ ಉಡುಗೊರೆ ರೂ. 30,000, ಔಷಧಿ ಮಾರಾಟ ರೂ12,000,

ಸಂದರ್ಶನ ಶುಲ್ಕ ರೂ. 10,000

ಪಾವತಿ : ಕ್ಲಿನಿಕ್ ಬಾಡಿಗೆ ರೂ. 25,000, ವೃತ್ತಿಗೆ ಸಂಬಂಧಿಸಿದ ಪುಸ್ತಕ ಖರೀದಿ ರೂ. 12,000, ಚಾರಿಟೇಬಲ್ ಡೊನೇಶನ್ ರೂ. 4,000

9. ಆದಾಯ ತೆರಿಗೆ ವರ್ಷ 2010-11 ರಲ್ಲಿ ಶ್ರೀಯುತ ಕೇಶವರ ಇತರ ಮೂಲಗಳ ಆದಾಯವನ್ನು ಕಂಡುಹಿಡಿಯಿರಿ.

ಕುಟುಂಬ ಪಿಂಚಣಿ ಪಡೆದಿದ್ದು ಮಾಸಿಕ ರೂ. 3,000

ಲಾಟರಿಯಲ್ಲಿ ಗೆದ್ದಿದ್ದು ರೂ. 69,100 (ನಿವ್ವಳ)

ನಿಶ್ಚಿತ ಠೇವಣಿ ಮೇಲಿನ ಬಡ್ಡಿ ರೂ. 15,000 (Gross)

ಲಾಟರಿ ಟಿಕೇಟಿನ್ ಖರೀದಿ ರೂ. 500.

## ವಿಭಾಗ - ಸಿ

ಈ ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ 15 ಅಂಕಗಳು. **(3×15=45)**

10. ಪ್ರಸಿದ್ಧ ಆದಾಯ ಸಲಹೆಗಾರರಾದ ಶ್ರೀಯುತ ರಂಗನಾಥರು ತಮ್ಮ ಲೆಕ್ಕ ಪುಸ್ತಕವನ್ನು ನಗದು ಆಧಾರದಲ್ಲಿ ಇಟ್ಟಿರುತ್ತಾರೆ. 2009-10 ರ ಸ್ವೀಕೃತಿ ಹಾಗೂ ಪಾವತಿ ತ:ಖ್ತೆಯು ಈ ಕೆಳಗಿನಂತಿದೆ.

**ಸ್ವೀಕೃತಿ ಮತ್ತು ಪಾವತಿ ತ:ಖ್ತೆ ವಾರ್ಷಿಕ ದಿನಾಂಕ ಅಂತ್ಯ 31-3-2010**

| ಸ್ವೀಕೃತಿ | ರೂ. | ಪಾವತಿ | ರೂ. |
|---|---|---|---|
| ಪ್ರಾರಂಭಿಕ ಶಿಲ್ಕು | 22,000 | ಪುಸ್ತಕ ಖರೀದಿ | 12,000 |
| ಕಕ್ಷಿದಾರದಿಂದ ಬಂದ ಫೀ: | | (ವಾರ್ಷಿಕ ಪ್ರಕಟಣೆ) | |
| 2009-10 ಕ್ಕೆ | 1,50,000 | ಕಂಪ್ಯೂಟರ್ ಖರೀದಿ | 30,000 |
| 2010-11 ಕ್ಕೆ | 33,000 | ಕಾರಿನ ವೆಚ್ಚ | 18,000 |
| ಉಡುಗೊರೆ | 25,000 | ಕಚೇರಿ ವೆಚ್ಚ | 40,000 |
| ಕಾರು ಖರೀದಿಸಲು ಕಕ್ಷಿದಾರನಿಂದ ಬಡ್ಡಿ | | ಸಿಬ್ಬಂದಿ ಸಂಬಳ: | |
| ರಹಿತ ಸಾಲ | 2,40,000 | 2009-10 ಕ್ಕೆ | 32,000 |
| ಲಾಟರಿಯಿಂದ ಗೆದ್ದಿದ್ದು (Gross) | 46,000 | 2010-11 ಕ್ಕೆ | 8,000 |

| | | | |
|---|---|---|---|
| ಕೂಡು ಕುಟುಂಬದಿಂದ ಬಂದ ಭಾಗ | 70,000 | ಕಾರು ಖರೀದಿ | 3,00,000 |
| ಪಾಲುದಾರಿಕೆ ಸಂಸ್ಥೆಯಿಂದ ಬಂದ ಬೋನಸ್ | | ಆದಾಯ ತೆರಿಗೆ | 5,000 |
| ಮತ್ತು ಕಮಿಷನ್ | 14,000 | ವೃತ್ತಿ ತೆರಿಗೆ | 3,000 |
| | | ಆರೋಗ್ಯ ವಿಮಾ ಕಂತು | 2,000 |
| | | ಅಂತಿಮ ಲೆಕ್ಕ ಶಿಲ್ಕು | 1,50,000 |
| | **ರೂ. 6,00,000** | | **ರೂ. 6,00,000** |

ಕಾರು 40% ಕಚೇರಿಗೆ ಸಂಬಂಧಿಸಿದಂತೆ ಮತ್ತು 60% ಭಾಗ ವೈಯಕ್ತಿಕ ಕಾರಣಕ್ಕೆ ಉಪಯೋಗಿಸಲ್ಪಡುತ್ತದೆ. ರೂ. 5,000 ಮೌಲ್ಯದ ಉಡುಗೊರೆ ಕಕ್ಷಿದಾರರಿಂದ ಪಡೆದುದಾಗಿದೆ. ಕಚೇರಿಯ ವೆಚ್ಚದಲ್ಲಿ ರೂ. 5,000 ತನ್ನ ಹೆಂಡತಿ ಸಾಮಾನ್ಯವಾಗಿ ಬಂದು ಸಹಾಯ ಮಾಡುವುದಕ್ಕೆ ಕೊಟ್ಟ ಸಂಬಳವಾಗಿರುತ್ತದೆ. ಕಾರಿನ ಮೇಲೆ 15% ಸವಕಳಿ ಇರುತ್ತದೆ.

11. ಶ್ರೀಯುತ ಶರತ್‌ರವರು ಹಣಕಾಸು ವರ್ಷ 2009-10 ರ ತಮ್ಮ ಆದಾಯದ ಬಗೆಗೆ ಮಾಹಿತಿ ನೀಡಿರುತ್ತಾರೆ. ಆದಾಯ ತೆರಿಗೆ ವರ್ಷ 2010-11 ರಲ್ಲಿ ಅವರ ಇತರ ಆದಾಯ ಮೂಲದ ಲೆಕ್ಕವನ್ನು ಕಂಡುಹಿಡಿಯಿರಿ.

i) Crossword Puzzles ನಿಂದ ಬಂದ ಹಣ (net) ರೂ. 6,940.

ii) ಪತ್ರ ಪುಸ್ತಕಕ್ಕೆ ಬಂದ ಗೌರವ ಧನ (Gross) ರೂ. 45,000 ( ಈ ಸಂಬಂಧ ಸ್ವೀಕೃತ ವೆಚ್ಚ ರೂ. 12,500)

iii) ರೂ. 40,000 ಮುನಿಸಿಪಲ್ ಸಾಲಪತ್ರದ ಮೇಲೆ ಶೇ. 8 ಬಡ್ಡಿ.

iv) ಕರ್ನಾಟಕ ರಾಜ್ಯ ಸರ್ಕಾರದ ರೂ. 80,000 ಸಾಲಪತ್ರದ ಮೇಲೆ ಶೇ. 10 ರ ಬಡ್ಡಿ.

v) ಭಾರತ ಸರ್ಕಾರದ ಶೇ. 7 ರ ಬಡ್ಡಿಯ ರೂ. 30,000 ದ ಸಾಲಪತ್ರದ ಮೇಲೆ ಬಂಡವಾಳ ಹೂಡಿಕೆ ಮಾಡಿರುತ್ತಾನೆ. ವರ್ಷದ ಬಡ್ಡಿಯನ್ನು ಸ್ವೀಕರಿಸಿರುತ್ತಾನೆ.

vi) ಬ್ಯಾಂಕ್ ಠೇವಣಿಯ ಮೇಲೆ ರೂ. 2,000 ಬಡ್ಡಿ ಸ್ವೀಕರಿಸಿರುತ್ತಾನೆ.

vii) ರೂ. 8,000 ಭಾರತೀಯ ಕಂಪೆನಿಯಿಂದ ಡಿವಿಡೆಂಡ್ ಪಡೆದಿರುತ್ತಾನೆ.

viii) ಗೊತ್ತಿಲ್ಲದ ಮೂಲದಿಂದ ಗಳಿಕೆ ರೂ. 10,000

12. ಶ್ರೀಯುತ ಶಿವಕುಮಾರ್‌ರವರ ಲಾಭ ನಷ್ಟದ ತಃಖ್ತೆ ವಾರ್ಷಿಕ ವರ್ಷಾಂತ್ಯದ ದಿನಾಂಕ 31-3-2010 ರಂದು ಕೆಳಗಿನಂತಿದೆ. ಆದಾಯ ತೆರಿಗೆ ವರ್ಷ 2010-11 ರಲ್ಲಿ ವ್ಯವಹಾರ ಮೂಲದ ಆದಾಯವೆಷ್ಟು ಎಂದು ಕಂಡುಹಿಡಿಯಿರಿ.

| | ರೂ.ಗಳು | | ರೂ.ಗಳು |
|---|---|---|---|
| ಬಾಡಿಗೆ | 60,000 | ಸ್ಥೂಲ ಲಾಭ | 5,23,000 |
| ರೇಟ್ಸ್ | 6,000 | ಹೂಡಿಕೆ ಮೇಲೆ ಬಡ್ಡಿ | 28,000 |
| ಸಂಬಳ | 54,000 | ಸ್ವತ್ತಿನ ಮೇಲೆ ಬಾಡಿಗೆ | 24,000 |
| ದೀಪಾವಳಿ ಪೂಜಾ ಖರ್ಚು | 2,000 | ಇತರೇ ಆದಾಯ | 16,000 |
| ಸಾಲದ ಮೇಲೆ ಬಡ್ಡಿ | 1,25,000 | ಕಮಿಷನ್ | 37,000 |
| ಇತರೇ ಖರ್ಚುಗಳು | 55,000 | | |
| ಕರಡು ಸಾಲ | 6,000 | | |
| ದಾನ | 1,000 | | |
| ಕರಡು ಸಾಲ ಮೀಸಲು | 2,000 | | |
| ಮನರಂಜನೆ | 8,500 | | |
| ಕಳ್ಳತನದಿಂದ ನಷ್ಟ | 14,000 | | |
| ನಿವ್ವಳ ಲಾಭ | 2,94,500 | | |
| | ರೂ. 6,28,000 | | ರೂ. 6,28,000 |

ಇತರೇ ಮಾಹಿತಿ :

1) ಸಂಬಳದಲ್ಲಿ ರೂ. 24,000, ಬಿ.ಕಾಂ ಓದುತ್ತಿರುವ ಮಗನು ವ್ಯವಹಾರದಲ್ಲಿ ಬಂದು ಸಹಾಯ ಮಾಡುವುದಕ್ಕೆ ಕೊಡುವ ಸಂಬಳವಾಗಿದೆ.

2) ಬಾಡಿಗೆಯಲ್ಲಿ ರೂ. 12,000 ತೆರಿಗೆದಾರನ ಸ್ವಂತ ಅಂಗಡಿಗೆ ಕೊಡಲಾಗುತ್ತಿದೆ.

3) ರೂ. 60,000 ಸಾಲಕ್ಕೆ ಶೇ. 15 ರ ಬಡ್ಡಿಯನ್ನು ಕೊಡುತ್ತಿದ್ದು, ಆತನ ಹೆಂಡತಿಯೇ ಆತನಿಂದ ಪಡೆದ ಹಣದಿಂದ ಸಾಲ ನೀಡಿದ್ದಾಗಿದೆ. ಆ ಬಡ್ಡಿಯು ಸಾಲದ ಮೇಲಿನ ಬಡ್ಡಿಯಲ್ಲಿ ಸೇರಿದೆ.

4) ಹರಿದ್ವಾರದ ಯಾತ್ರೆಗೆ ಮಾಡಿದ ಖರ್ಚು ರೂ. 9,000 ಇತರೇ ಖರ್ಚುಗಳಿಗೆ ಸೇರಿಸಲಾಗಿದೆ.

5) ರೂ. 1,500 ಸ್ಥಳೀಯ ಶಾಸಕರಿಗೆ ಟೀ ಗೆ ಮಾಡಿದ ಖರ್ಚಾಗಿದ್ದು ಮನರಂಜನೆ ವೆಚ್ಚದಲ್ಲಿ ಅದನ್ನು ಸೇರಿಸಲಾಗಿದೆ.

6) ರೂ. 40,000 ಚಿನ್ನದ ಕಳ್ಳ ಸಾಗಾಣಿಕೆಯ ಗಳಿಕೆಯಾಗಿದ್ದು ಲೆಕ್ಕಪುಸ್ತಕದಲ್ಲಿ ತೋರಿಸಲಾಗಿಲ್ಲ.

7) ರೂ. 4,000 ಸ್ವತ್ತಿನ ಬಾಡಿಗೆ ರೇಟ್ಸ್‌ನಲ್ಲಿ ಸೇರಿಕೊಂಡಿದೆ.

13. Mr. X ವಾರ್ಷಿಕ ವರ್ಷಾಂತ್ಯ ದಿನಾಂಕ 31-3-2010 ರಂದು ಮಾರಾಟ ಮಾಡಿದ ಸ್ವತ್ತಿನ ವಿವರಗಳು ಈ ಕೆಳಗಿನಂತಿದೆ.

a) ಷೇರುಗಳು (ರೂ. 54,000 ಕ್ಕೆ ಎಪ್ರಿಲ್ 1991 ರಂದು ಖರೀದಿಸಿದ್ದು) ಮಾರಾಟ ಮಾಡಿದ್ದು 15-12-2009 ರಂದೂ ರೂ. 95,000 ಕ್ಕೆ.

b) ತಾ. 1-4-82 ರಂದು Yಗೆ ಒಡವೆಯನ್ನು 2,70,000 ಮಾರಲು ಒಪ್ಪಿದ್ದು Yಯೊಡನೆ ಈ ಒಪ್ಪಂದ ಫಲಕಾರಿಯಾಗಲಿಲ್ಲ, ಇದರ ಖರೀದಿ 1977 ರಲ್ಲಿ ರೂ. 1,50,000 ಕ್ಕೆ ಆಗಿತ್ತು. ಈ ಮಾರಾಟ ಒಪ್ಪಂದಕ್ಕೆ Y ಯಿಂದ ಪಡೆದ ರೂ. 20,000 ಮುಟ್ಟುಗೋಲು ಹಾಕಲಾಯಿತು. X ಈಗ ಒಡವೆಯನ್ನು ತಾ. 15-7-09 ರಂದು ರೂ. 13,10,000 ಕ್ಕೆ ಮಾರಾಟ ಮಾಡುತ್ತಾನೆ. ರೂ. 20,000 ಮಾರಾಟದ ಖರ್ಚು ಉಂಟಾಗಿದೆ. ಡಿಸೆಂಬರ್ 2009ರಲ್ಲಿ ರೂ. 2,50,000 ಕ್ಕೆ ವಾಸದ ಮನೆಯನ್ನು ಖರೀದಿಸುತ್ತಾನೆ.

c) ಸಾಲಪತ್ರ (ಸೆಪ್ಟಂಬರ್ 2008ಕ್ಕೆ ರೂ. 50,000 ಕ್ಕೆ ಖರೀದಿಸಿದ್ದು) ಮಾರಾಟ ಮಾಡಿದ್ದು 31-12-2009 ರಲ್ಲಿ ರೂ. 45,000 ಕ್ಕೆ.

d) ಮೋಟರ್ ಕಾರನ್ನು ಮಾರಿದ್ದು (ಅಗಸ್ಟ್ 2007 ಕ್ಕೆ ರೂ. 1,50,000 ಕ್ಕೆ ಖರೀದಿಸಿದ್ದು) 15-3-2010 ರೂ. 1,60,000 ಕ್ಕೆ

(CII : 82-83 = 109, 1991-92 = 199, 2009-10=632)

14. ಸೂರ್ಯ ವರ್ಷಾಂತ್ಯ ತಾ. 31-3-2010 ರಂದು ತನ್ನ ಆದಾಯದ ವಿವರಗಳನ್ನು ಈ ಕೆಳಗೆ ನಮೂದಿಸಿದ್ದಾರೆ.

i) ಬಾಡಿಗೆ ಮನೆಯಲ್ಲಿ ವಾಸವಿದ್ದು ತಿಂಗಳಿಗೆ ರೂ. 6,000 ಬಾಡಿಗೆ ಕೊಡುತ್ತಾರೆ. ಅದರಲ್ಲಿ $\frac{1}{3}$ ಭಾಗವನ್ನು ತಿಂಗಳಿಗೆ ರೂ. 3,000 ದಂತೆ ಉಪ ಬಾಡಿಗೆಗೆ ಕೊಡುತ್ತಾರೆ. ಆ ಮನೆಗೆ ಕೊಡಬೇಕಾದ ಮುನಿಸಿಪಲ್ ಟ್ಯಾಕ್ಸ್ ರೂ. 1,500 ಮತ್ತು ಮನೆ ರಿಪೇರಿಯ ಪೂರ್ಣ ಖರ್ಚು ರೂ. 6,000ನ್ನು ತಾವೇ ಮಾಡುತ್ತಾರೆ.

ii) ಬಾಂಗ್ಲಾದೇಶದಲ್ಲಿರುವ ಕೃಷಿ ಭೂಮಿಯಿಂದ ಗಳಿಕೆ ರೂ. 20,000

iii) ರೂ. 4,000 UTI ನಿಂದ ಲಾಭಾಂಶ.

iv) ಅವರೊಡನಿರುವ ಈ ಕೆಳಗಿನ ಹೂಡಿಕೆಗಳು :

a) 8% ರೂ. 1,00,000 ತೆರಿಗೆ ಮುಕ್ತ ವಾಣಿಜ್ಯ ಸಾಲಪತ್ರಗಳು (not listed)

b) 7% ರೂ. 30,00 JCT Mills Ltd ನ ಸಾಲಪತ್ರಗಳು

c) 10% ರೂ. 72,000 ತೆರಿಗೆ ಮುಕ್ತ LIC ಯ ಸಾಲ ಪತ್ರಗಳು

d) ರೂ. 10,000 ದ ಉ.ಪ್ರ. ರಾಜ್ಯ ವಿದ್ಯುತ್ ಬೋರ್ಡ್‌ನ ಬಾಂಡ್ ಶೇ. 10% ಬಡ್ಡಿ.

v) ರೂ. 8,000 ಪೋಸ್ಟಾಫೀಸ್ ಉಳಿತಾಯ ಖಾತೆಯ ಬಡ್ಡಿ.

vi) ಮ್ಯಾಗಜೀನ್‌ಗಳಲ್ಲಿ ಲೇಖನ ಬರೆದಿದ್ದುದಕ್ಕೆ ಪಡೆದ ಗೌರವಧನ ರೂ. 1,000.

vii) ಹಲವಾರು ವಿಶ್ವವಿದ್ಯಾಲಯಗಳಲ್ಲಿ ಪರೀಕ್ಷಕನಾಗಿ ಪಡೆದ ಸಂಭಾವನೆ ರೂ. 10,000.

ಆದಾಯ ತೆರಿಗೆ ವರ್ಷದಲ್ಲಿ ಇತರ ಮೂಲದ ಆದಾಯವನ್ನು ಕಂಡುಹಿಡಿಯಿರಿ AY : 2010-11.

---